ಕೃಷ್ಣಾ ಮೇಲ್ದಂಡೆ ಯೋಜನೆಯ ಡಿಸ್ಟ್ರಿಬ್ಯೂಟರಿಯಲ್ಲಿ ನೀರು ಮುಂದೆ ಹೋಗುವ ಬದಲು ಹಿಂದೆ ಹೋಗುತ್ತಿರುವ ಬಗ್ಗೆ

೩೬೩. (೪೭೦) ಶ್ರೀ ಶಿವಶೇಖರಪ್ಪ ಗೌಡ ಶಿರವಾಳ (ಶಹಾಪುರ).—ಮಾನ್ಯ ವಿಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೃಷ್ಣ ಮೇಲ್ದಂಡೆ ಯೋಜನೆಯ ಎಸ್.ಬಿ.ಸಿ ಳಿನೇ ಡಿಸ್ಟ್ರಿಬ್ಯೂಟರಿಯಲ್ಲಿ ಲ್ಯಾಟರಲ್ ನಿರ್ಮಾಣಕ್ಕೆ ವೆಚ್ಚವಾದ ಹಣವೆಷ್ಟು ?

ಆ) ಸದರಿ ಕಾಲುವೆಯಲ್ಲಿ ನೀರು ಮುಂದೆ ಹೋಗುವ ಬದಲು ಹಿಂದಕ್ಕೆ ಹೋಗುತ್ತಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ, ನಿರ್ಮಾಣ ಮಾಡಿದ ಅಧಿಕಾರಿಗಳ ಮೇಲೆ ಕ್ರಮವನ್ನೇನಾದರೂ ಕೈಗೊಳ್ಳಲಾಗಿದೆಯೆ ?

ಈ) ಮೇಲ್ಕಂಡ ಡಿಸ್ಟ್ರಿಬ್ಯೂಟರಿಯಲ್ಲಿ ರಿಪೇರಿಗೆಂದು ಸೂಮಾರು ೮೦ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿರುವುದು ನಿಜವಲ್ಲವೆ ?

ಉ) ಹಾಗಿದ್ದಲ್ಲಿ, ಯಾವ ಬಾಬಿಗಾಗಿ ವೆಚ್ಚ ಮಾಡಲಾಗಿದೆ ? (ವಿವರವನ್ನೊದಗಿಸಬೇಕಾಗಿ ವಿನಂತಿ)

ಮುಖ್ಯ ಮಂತ್ರಿಗಳು (ಶ್ರೀ ಎಸ್. ಆರ್. ಬೊಮ್ಮಾಯಿ). —

ಅ) ಶಹಾಪುರ ಉಪ ಕಾಲುವೆಯ ವಿತರಣಾ ನಾಲೆ ಸಂಖ್ಯೆ ೪ ರಿಂದ ಹೊರಡುವ ೬ ಪಾರ್ಶ್ವ ಕಾಲುವೆಗಳ ನಿರ್ಮಾಣಕ್ಕೆ ೧೭,೩೩,೦೧೪ ರೂ. ಗಳು ವೆಚ್ಚವಾಗಿರುತ್ತದೆ,

ಆ) ಶಹಾಪುರ ಉಪ ಕಾಲುವೆಯು ಕಿ.ಮೀ. ೩ ಮತ್ತು ಪಾರ್ಶ್ವ ಕಾಲುವೆ ಸಂಖ್ಯೆ ೧ ಮತ್ತು ೨ರ ತಳಮಟ್ಟದಲ್ಲಿ ಅಲ್ಲಲ್ಲಿ ಸ್ವಲ್ಪ ಏರುಪೇರುಗಳಿದ್ದುದರಿಂದ ನೀರು ನಿಲ್ಲುತ್ತಿತ್ತು.

ಇ) ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ನಿಗದಿ ಪಡಿಸುವ ಬಗ್ಗೆ ವಿಷಯವು ತನಿಖೆಯಲ್ಲಿದೆ.

ಈ) ತಳಮಟ್ಟದ ಏರುಪೇರುಗಳನ್ನು ಸಂಬಂಧಪಟ್ಟ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ದುರಸ್ತಿ ಮಾಡಿದ್ದಾರೆ. ಏರಿಗಳನ್ನು ಎತ್ತರಿಸುವ ಕಾಮಗಾರಿಗಾಗಿ ೫೨,೫೫೪ ರೂಪಾಯಿಗಳು ವೆಚ್ಚವಾಗಿರುತ್ತದೆ.

ಉ) ಏರಿಗಳನ್ನು ಎತ್ತರಿಸುವ ಕಾಮಗಾರಿಗಳ ವಿವರ ಹೀಗಿದೆ:—

೧)	ವಿತರಣಾ ಕಾಲುವೆಯ ಕಿ.ಮೀ. ೩ರ ಏರಿಯನ್ನು ಎತ್ತರಿಸುವುದಕ್ಕಾಗಿ...	ರೂ. ೨೦,೭೩೧–೦೦
೨)	ಪಾರ್ಶ್ವ ಕಾಲುವೆ ಸಂಖ್ಯೆ ೨ರ ಏರಿಯನ್ನು ಎತ್ತರಿಸುವುದಕ್ಕಾಗಿ...	ರೂ. ೩೧,೮೨೩–೦೦
	ಒಟ್ಟು	ರೂ. ೫೨,೫೫೪–೦೦

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಪು ಕ್ಷೇತ್ರದ ಪೋಲೀಸ್ ಠಾಣೆ ಬಗ್ಗೆ

೩೬೪. (೩೨೯) ಶ್ರೀ ವಸಂತ ವಿ. ಸಾಲ್ಯಾನ್ (ಕಾಪು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಾಪು ಕ್ಷೇತ್ರದ ಪೋಲೀಸ್ ಠಾಣೆಯನ್ನು ಪೂರ್ಣ ಪ್ರಮಾಣದ ಠಾಣೆಯನ್ನಾಗಿ ಮಾಡುವುದಕ್ಕೆ ಸರ್ಕಾರವು ಯೋಜನೆ ಹಾಕಿದೆಯೇ ?